ದಿನಗೂಲಿ ನೌಕರರ ಬಗ್ಗೆ ಶ್ರೇಷ್ಠ ನ್ಯಾಯಾಲಯದ ತೀರ್ಪು ಸಂಪೂರ್ಣ ಜಾರಿಗೆ ಬರದಿರುವ ಬಗ್ಗೆ

೩೨. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಸೇವೆಯಲ್ಲಿರುವ ದಿನಗೂಲಿ ನೌಕರರನ್ನು ಖಾಯಂಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯ ಸರ್ಕಾರವು ಭಾರತದ ಶ್ರೇಷ್ಠ ನ್ಯಾಯಾಲಯದ ತೀರ್ಪನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲಾಗಿದೆಯೇ?

ಇ) ಅನುಷ್ಠಾನಕ್ಕೆ ತರದಿರಲು ಕಾರಣರಾದ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸರ್ಕಾರದವರು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಆ) ಮತ್ತು ಇ) } ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರತಿ ಇದೀಗ ಬಂದಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸರ್ಕಾರಿ ನೌಕರರಿಗೆ ಇಲಾಖಾ ಪರೀಕ್ಷೆ ಮಾಡಿದ ನಂತರವೂ ಬಡ್ತಿ ಸಿಗದೆ ಇರುವುದು

೩೩. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಸರ್ಕಾರಿ ನೌಕರರು ಬಡ್ತಿ ಹೊಂದಲು ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡುವ ಬಗ್ಗೆ ಕೆ.ಸಿ.ಎಸ್.ಆರ್. ನಿಯಮ ೪ (ಇಲಾಖಾ ಪರೀಕ್ಷೆ ನಿಯಮ ೧೯೭೪) ರಲ್ಲಿ ನಿರ್ಬಂಧ ವಿದ್ದರೂ ಶಿವಮೊಗ್ಗ ಜಿಲ್ಲಾ ರಾಜಸ್ವ ಇಲಾಖೆಯಲ್ಲಿ ನಿಗದಿತ ಕಾಲದಲ್ಲಿ ಅಂದರೆ, ೧-೫-೭೭ರ ನಂತರ ಬಡ್ತಿ ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ ಎಷ್ಟು ನೌಕರರಿಗೆ ಅಂದರೆ ಎರಡನೇ ದರ್ಜೆ ಸಹಾಯಕರಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ೧-೫-೭೭ರಿಂದ ಬಡ್ತಿ ದೊರೆತಿದೆ, ಹಾಗೂ ನಿಯಮ ಬಾಹಿರ ಬಡ್ತಿಯಿಂದ ಪಾಸಾದ ಎಷ್ಟು ಜನ ೨ನೇ ದರ್ಜೆ ಸಹಾಯಕರಿಗೆ ಬಡ್ತಿ ದೊರೆಯುದೆ ಮೊಟಕಾಗಿದೆ.

ಇ) ಈ ಬಗ್ಗೆ ನ್ಯಾಯಾಲಯ ನಿರ್ದೇಶನವಿದ್ದರೂ ಪಾಲನೆ ಮಾಡದಿರಲು ಕಾರಣವೇನು?

ಈ) ಕೆ.ಎ.ಟಿ. ೫೯೫-೮೭ ದಿನಾಂಕ ೨೯-೧-೮೮ರ ತೀರ್ಪನ್ನು ಅನುಷ್ಠಾನಕ್ಕೆ ತರುವಲ್ಲಿ ವಿಳಂಬವೇಕೆ?

ಶ್ರೀ ಅಜೀಜ್ ಸೇಠ್ (ಕಂದಾಯ ಸಚಿವರು).—

ಅ) ಅಂತಹ ಬಡ್ತಿ ನೀಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೈಸೂರು ನಗರದ ಪ್ರಾಧಿಕಾರದಲ್ಲಿ ನಿಯಮ ಉಲ್ಲಂಘನೆ

೩೪. ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಬಂದರು ಮತ್ತು ವೀನಂಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೇ?

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ನಿಯಮಗಳಿಗನುಸಾರವಾಗಿ ಸರ್ಕಾರದವರ ಅನುಮೋದನೆಯನ್ನು ಪಡೆದು ಬಡಾವಣೆಗಳನ್ನು ರೂಪಿಸಿದೆಯೇ?